# *ಕರ್ನಾಟಕ ಲೋಕಾಯುಕ್ತ*

ಸಂ.ಕಂಪ್ಲೇಂಟ್/ಉಪಲೋಕ್/ಎಂವೈಎಸ್-1370/2016/ಡಿಆರ್ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:28.3.2017.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ.ಹೆಚ್.ಜೆ.ಕುಮಾರ್, ಮಾಜಿ ಪುರಸಭಾ ಸದಸ್ಯರು, ಸಿಂಗಮ್ಮ ಬಡಾವಣೆ, ಹೊಳೆನರಸೀಪುರ ತಾಲ್ಲುಕು, ಹಾಸನ ಜಿಲ್ಲೆ ಅವರು ಸಲ್ಲಿಸಿದ ದೂರಿನ ಕುರಿತು.

****

ಶ್ರೀ.ಹೆಚ್.ಜೆ.ಕುಮಾರ್, ಮಾಜಿ ಪುರಸಭಾ ಸದಸ್ಯರು, ಸಿಂಗಮ್ಮ ಬಡಾವಣೆ, ಹೊಳೆನರಸೀಪುರ ತಾಲ್ಲುಕು, ಹಾಸನ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ), ಇವರು ಶ್ರೀ.ವೈ.ಎಂ.ರೇಣುಕುಮಾರ್, ತಹಶೀಲ್ದಾರ್, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. ದೂರುದಾರರು ತಮ್ಮ ದೂರಿನಲ್ಲಿ, ಹೊಳೆನರಸೀಪುರ ಗ್ರಾಮದ ಸ. ನಂ: 200ರಲ್ಲಿ 20ಗು., ಜಮೀನಿದ್ದು ಈ ಹಿಂದೆ 200/1 ಮತ್ತು 200/2 ಅಂತ ಪ್ರತ್ಯೇಕ ಪೋಡುಗಳಾಗಿದೆ ಈ ಜಾಗದಲ್ಲಿ ಸ. ನಂ: 202ಗೆ ಸಂಬಂಧಿಸಿದ 9ಗು., ಜಮೀನಿದ್ದು ಮೂಲತಃ ಲಕ್ಷ್ಮೀ ನರಸಿಂಹಸ್ವಾಮಿ ದೇವರ ಜಮೀನಾಗಿದೆ ಎಲ್.ಆರ್.ಎಫ್. ನಲ್ಲಿ ದೇವಸ್ಥಾನದ ಅಲಂಕಾರದ ರಾಮಣ್ಣನ ಮಗ ಶ್ರೀನಿವಾಸ ಹೆಸರಿಗೆ ಮಂಜೂರಾಗಿದೆ. ಈದಾದ ನಂತರ ಪರ್ವತಮ್ಮ ರವರಿಗೆ ಖಾತೆಯಾಗಿದೆ. ಈ ಜಮೀನಿನಲ್ಲಿ ಪುರಾತನ ಕಾಲದ ಕಲ್ಯಾಣಿ ಬಾವಿ ಇದೆ ದೇವಸ್ಥಾನಕ್ಕೆ ಸಂಬಂಧಪಟ್ಟ ಬಾವಿ ಆಗಿದ್ದರಿಂದ ಒಕ್ಕರಣೆ ಬೀದಿಯ ಗ್ರಾಮಸ್ಥರು ಮತ್ತು ಸುತ್ತಲಿನ ರೈತರು ಕುಡಿಯುವ ನೀರಿಗೆ ಮತ್ತು ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದರು. ಭಾಗ್ಯಮ್ಮ ಇವರು 2 ಗು., ಜಮೀನು ಕ್ರಯಕ್ಕೆ ಪಡೆದು ಬಾವಿಯನ್ನು ಮುಚ್ಚಿಹಾಕಿದ್ದಾರೆ. ಈ ಬಾವಿಯ ಜಾಗಕ್ಕೆ ಕಂದಾಯ

ನಿಗಧಿ ಮಾಡಿಕೊಡಲು ಅಕ್ರಮ ಕಡತ ತಯಾರು ಮಾಡಿಸಿರುತ್ತಾರೆ. 3ಗು., ಜಾಗವನ್ನು ಪ್ರತ್ಯೇಕವಾಗಿ ಸರ್ಕಾರಿ ಕಲ್ಯಾಣಿ /ಬಾವಿ ಅಂತ ನಮೂದು ಮಾಡಿ ಬಾವಿಯನ್ನು ಪುನರ್ ಚೇತನ ಮಾಡಿಕೊಡುವಂತೆ ಕೋರಿಕೊಂಡಿದ್ದಾರೆ. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳು ಅಲ್ಲವೆ ಅನುಪಾಲನ ವರದಿಯನ್ನು ಕೇಳಲಾಗಿದೆ

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸ. ನಂ; 205 ಭೂ ಸುಧಾರಣೆ ಕಾಯಿದೆಯಂತೆ ಪರ್ವತಮ್ಮ ಇವರಿಗೆ ಮಂಜೂರಾಗಿದೆ ಇದರಲ್ಲಿ 2ಗು., ರಾಜಿ ಎನ್ನುವವರಿಗೆ ವರ್ಗಾವಣೆಯಾಗಿದೆ. ಭಾಗ್ಯಮ್ಮ ಎನ್ನುವವರು ಕ್ರಯಕ್ಕೆ ಪಡೆದು ಹಕ್ಕು ಬದಲಾವಣೆ ಮಾಡಿಕೊಂಡಿದ್ದಾರೆ. ಸದರಿ ಜಮೀನಿನ ಆರ್.ಟಿ.ಸಿ ಹಾಗೂ ಆಕಾರ್ ಬಂದ್ ದಾಖಲೆಯಂತೆ ಒಟ್ಟು 5ಗುಂಟೆ ಜಮೀನಿದ್ದು 3ಗುಂಟೆ ಎ.ಖರಾಬು, ಉಳಿಕೆ 2ಗುಂಟೆ ಸಾಗುವಳಿ ಜಮೀನಿರುತ್ತದೆ. ಖಾತೆದಾರರೇ ಎ–ಖರಾಬು ಜಮೀನಿನ ಹಕ್ಕುದಾರರಾಗಿದ್ದಾರೆ. ಸದರಿ 3ಗು., ಎ ಖರಾಬು ಜಮೀನನ್ನು ತಮಗೆ ಸ್ಥಿರೀಕರಿಸಿಕೊಡಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರಿಂದ ಕಂದಾಯ ಸಚಿವರವರೆಗೆ ಅರ್ಜಿಯನ್ನು ಸಲ್ಲಿಸಿದ್ದಾರೆ. ಎ.ಸಿ., ರವರು ಖರಾಬು ಪ್ರದೇಶವನ್ನು ಮಂಜೂರು ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ ಅಂತ ವಿಲೇ ಮಾಡಿದ್ದಾರೆ. ಆದ್ದರಿಂದ ಸ್ಥಳ ತನಿಖೆ ಮಾಡಿದಾಗ ಅಲ್ಲಿ ಯಾವುದೇ ಬಾವಿ ಇರುವುದಿಲ್ಲ ಖರಾಬು ಉತ್ತರ ನಕಲು ಪ್ರಕಾರ 3ಗು., ಯಲ್ಲಿ ಬಾವಿ ಪೂರ ಖಾಯಂ ಇರುತ್ತದೆ. ಆದರೆ ಇದು ಸರ್ಕಾರಿ ಪ್ರದೇಶವಾಗಿಲ್ಲ ತಾವು ಯಾವುದೇ ಕ್ರಮ ಕೈಗೊಳ್ಳದೆ ಇರುವುದರಿಂದ ದೂರನ್ನು ಮುಕ್ತಾಯಗೊಳಿಸಲು ಕೋರಿಕೊಂಡಿದ್ದಾರೆ.

4. ಈ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ಸದರಿ 3ಗು., ಜಮೀನನ್ನು ಸರ್ಕಾರಿ ಕಲ್ಯಾಣಿ ಅಂತ ಪ್ರತ್ಯೇಕವಾಗಿ ಪೋಡು ಮಾಡಿ ಆರ್.ಟಿ.ಸಿಯಲ್ಲಿ ನಮೂದಿಸಲು ಕೋರಿಕೊಳ್ಳುತ್ತಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ರಿ.ಸ ನಂ: 200/5ರಲ್ಲಿ ಆಕಾರ್ ಬಂದಿನಂತೆ 3ಗು., ಖರಾಬು ಇದ್ದು ಬಾವಿಯ ಬಗ್ಗೆ ಖಾಯಂ ಇರುತ್ತದೆ. ಎನ್ನುವುದು ದೂರುದಾರರು ಸಲ್ಲಿಸಿದ ದಾಖಲೆಗಳಿಂದ ತಿಳಿಯುತ್ತದೆ. ಭಾಗ್ಯಮ್ಮ ಎನ್ನುವವರು ಇದೇ 3ಗು., ನಾನು 7–8ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದೇನೆ. ನನಗೆ ಸ್ತಿರೀಕರಿಸಿ ಕೊಡಬೇಕೆಂದು ಕೇಳಿರುವ ಅರ್ಜಿಯನ್ನು ಎ.ಸಿ. ರವರು ವಜಾ ಮಾಡಿದ್ದಾರೆ. 2ಗು.,

ಜಮೀನನ್ನು ಮಾತ್ರ ಭಾಗ್ಯಮ್ಮ ರವರು ಕೊಂಡುಕೊಂಡಿದ್ದು ಉಳಿದ 3ಗು., ಪೋಟ್ ಖರಾಬು ಎ ಅಂತ ನಮೂದಿಸಲಾಗಿದೆ. ಎದುರುದಾರರಾದ ತಹಶೀಲ್ದಾರ್ ರವರು ಹಿಡುವಳಿ ಜಮೀನಿನ ಮಧ್ಯದಲ್ಲಿ ಎ. ಖರಾಬು ಇರುವುದರಿಂದ ಸದರಿ ಪ್ರದೇಶದ ಹಕ್ಕುದಾರರು ಖಾತೆದಾರರೆ ಆಗಿರುತ್ತಾರೆ ಅಂತ ಹೇಳುತ್ತಾರೆ. ಇದು ತಪ್ಪು ಮಾಹಿತಿ ಆಗಿದೆ ಏಕೆಂದರೆ ಎ–ಖರಾಬು ಉತಾರ ಪ್ರಕಾರ ಇದು ಬಾವಿ – ಇದರ ಬಗ್ಗೆ ಖರಾಬು ಪೂರಾ ಖಾಯಂ ಇಟ್ಟಿದೆ ಅಂತ ಪರ್ಯಾವೀಕ್ಷಕರ ಖರಾಬು ಉತಾರು ನಕಲಿನಿಂದ ತಿಳಿಯುತ್ತದೆ. ಯಾವುದೇ ಸಾರ್ವಜನಿಕರಿಗೆ ಆರ್.ಟಿ.ಸಿ ನಕಲುಗಳಲ್ಲಿ ನಮೂದುಗಳನ್ನು ಇದೇ ರೀತಿಯಾಗಿ ಮಾಡಿ ಅಂತ ಕೇಳುವ ಅಧಿಕಾರ ಇಲ್ಲ ಕಲಂ 61 ಕರ್ನಾಟಕ ಭೂ ಕಂದಾಯ ಅಧಿನಿಯಮದಡಿಯಲ್ಲಿ ಸರ್ಕಾರದ ವಿರುದ್ಧ ಆರ್.ಟಿ.ಸಿಯಲ್ಲಿ ಯಾವುದೇ ಎಂಟ್ರಿಯನ್ನು ತೆಗೆದುಹಾಕಲು /ಸೇರಿಸಲು ದಾವೆ ಹಾಕಲು ಬರುವುದಿಲ್ಲ. ಹೀಗಿರುವಾಗ 3ಗು., ಪ್ರದೇಶವನ್ನು ಸರ್ಕಾರಿ ಬಾವಿ/ಕಲ್ಯಾಣಿ ಅಂತ ಆರ್.ಟಿ.ಸಿ ನಮೂದು ಮಾಡಲು ಯಾವುದೇ ನಿರ್ದೇಶನ ಕೊಡಲು ಬರುವುದಿಲ್ಲ. ಖರಾಬು ಉತಾರಿನ ಪ್ರಕಾರ ಅದು ಬಾವಿ ಆಗಿರುವುದರಿಂದ ಬಾವಿಯನ್ನು ಪುನಃ ಸ್ಥಾಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 28/3/17.
(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.